International Journal of Kannada Research
www.kannadajournal.com

**ISSN: 2454–5813**
IJKR 2020; 6(1): 85-87
© 2020 IJKR
www.kannadajournal.com
Received: 13-11-2019
Accepted: 15-12-2019

**ಡಾ. ಮಂಜುನಾಥ್**
ಮುಖ್ಯಸ್ಥರು, ಕನ್ನಡ ವಿಭಾಗ
ಜೈನ್ ವಿಶ್ವವಿದ್ಯಾಲಯ,
ಬೆಂಗಳೂರು

**ಮಹದೇವ ಎಚ್.ಡಿ**
ಸಂಶೋಧನಾ ವಿದ್ಯಾರ್ಥಿ
ಜೈನ್ ವಿಶ್ವವಿದ್ಯಾಲಯ, ಬೆಂಗಳೂರು

**Corresponding Author:**
**ಮಹದೇವ ಎಚ್.ಡಿ**
ಸಂಶೋಧನಾ ವಿದ್ಯಾರ್ಥಿ
ಜೈನ್ ವಿಶ್ವವಿದ್ಯಾಲಯ, ಬೆಂಗಳೂರು

# ವಸುಧೇಂದ್ರರವರ ಕಥೆಗಳಲ್ಲಿನ ವಾಸ್ತವಪ್ರಜ್ಞೆಯ ಭಿನ್ನನೆಲೆಗಳು

**ಡಾ. ಮಂಜುನಾಥ್, ಮಹದೇವ ಎಚ್.ಡಿ**

**"ಕಥೆಯ ಸ್ವರೂಪ ಮತ್ತು ವ್ಯಾಪ್ತಿ"**

೨೦ನೇ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಣ್ಣ ಕಥೆಯ ಪ್ರಕಾರಕ್ಕೆ ವಿಶಿಷ್ಟ ಪರಂಪರೆಯಿದೆ, ಯಾವುದೇ ಸಾಹಿತ್ಯ ಹಾಗೂ ಸಾಂಸ್ಕೃತಿಕ ಒತ್ತಡಗಳು ತಮಗೆ ತಾವೇ ಸ್ವಯಂ ಪೂರ್ಣವಾಗಿರುವುದಿಲ್ಲ. ಆ ಚಾರಿತ್ರಿಕ ಒತ್ತಡಗಳಿಗೆ ಎದುರಾಗಿ ಸವಾಲುಗಳು, ವಾಗ್ವಾದಗಳು, ಸಂಘರ್ಷಗಳು ಉಂಟಾಗಿ ಆ ಮುಖಾಂತರ ಹೊಸ ಪ್ರವೃತ್ತಿಗೆ ಸಾಧ್ಯವಾಗುವ ಪ್ರಕ್ರಿಯೆಯನ್ನು ಸಣ್ಣಕಥಾ ಸಾಹಿತ್ಯವು ಹುಟ್ಟು ಹಾಕುತ್ತಲೇ ಇದೆ.

ಈ ನಿಟ್ಟಿನಲ್ಲಿಯೇ ಕಥೆಗಾರರಾದ ವಸುಧೇಂದ್ರರವರ ೫ ಕಥಾಸಂಕಲನಗಳು 'ಸಾಮಾಜಿಕ ಜಾಗೃತಿ' ಯ ದಿಕ್ಕಿನಲ್ಲಿ ಕೊಂಡೊಯ್ಯುವ ಕೆಲಸ ಮಾಡಿವೆ. ಇವರ ೫ ಕಥಾಸಂಕಲನಗಳಾದ ಮನೀಷೆ, ಯುಗಾದಿ, ಚೇಳು, ಹಂಪಿ ಎಕ್ಸ್‌ಪ್ರೆಸ್, ವಿಷಮ ಭಿನ್ನರಾಶಿ, ಇವುಗಳು ಸಮಾಜವನ್ನು ಭಿನ್ನರೂಪದಲ್ಲಿ ದರ್ಶಿಸುವ ಕೆಲಸವನ್ನು ಮಾಡಿವೆ. ಪ್ರಜ್ಞಾವಂತ ಆಧುನಿಕ ಹೊಸ ಕಥೆಗಾರರಾದ ವಸುಧೇಂದ್ರರವರ ಕಥೆಯ ರಚನೆಗಳೆಲ್ಲವು ಬದಲಾವಣೆಯ ಸೂಚನೆಯನ್ನು ಹೊಂದಿರುವಂತವುಗಳಾಗಿವೆ.

ಈ ಬದಲಾವಣೆಯು ಕಥನದ ಮಾದರಿಯಲ್ಲಿಯೇ ಆಗಿದೆ ಹಾಗೂ ಈ ವೈರುದ್ಯಗಳೆಲ್ಲವು ಸಾಮಾಜಿಕ ಸ್ತರಗಳ ಪಲ್ಲಟದಲ್ಲಿಯೂ ಕಂಡುಬರುತ್ತದೆ. ವಸುಧೇಂದ್ರರಂತವರ ಕಥೆಗಾರರ ಸಂದಿಗ್ಧತೆಯ ಕಾರಣದಿಂದಲೇ ಉಂಟಾಗಬಹುದಾದ ಬಿರುಕುಗಳು, ಅವರ ಸಾಹಿತ್ಯವನ್ನು ವಿಘಟಿತ ತುಣುಕುಗಳ ಅನುಭವ ಕಥನವೆಂಬುದನ್ನು ನಿರೂಪಿಸುತ್ತಿದೆ ಎಂಬುದೂ ವಾಸ್ತವಕ್ಕೆ ಹತ್ತಿವಾದ ಸಂಗತಿ.

ಇವರ ಕಥೆಯ ಶೈಲಿ ಲಘುದಾಟಿಯದ್ದಾಗಿದ್ದು, ಇವರ ಕಥೆಗಳು ಅನುಭವ ನಿರೂಪಿತ ಕಥಾನಕಗಳೆಂಬಂತೆ ಭಾವಿಸಿ ಬರೆಯುವ ಸೃಜನಶೀಲ ಕಥೆಗಾರರ 'ದ್ರವ್ಯ' ಮಾತ್ರ' 'ಸಾಮಾಜಿಕ ಜಾಗೃತಿಗೆ' ಹೊಂದುವಂತಹದ್ದಾಗಿದೆ. ಕಾರಣ ಇವರು ತಮ್ಮ ಕಥೆಗಳಲ್ಲಿ ಹಳೆಯ ಬದುಕನ್ನು ಮೆಲುಕು ಹಾಕುವ ಹೊಸ ಬದುಕಿನ ತಲ್ಲಣವನ್ನು ನೋಡುತ್ತಿರುವ ಪೀಳಿಗೆಯನ್ನು ಕೇಂದ್ರವಾಗಿಟ್ಟುಕೊಂಡು ಬರೆಯುವ ಸಾಮರ್ಥ್ಯವನ್ನು ಮಾತ್ರ ಚೆನ್ನಾಗಿ ಬಳಕೆ ಮಾಡಿಕೊಂಡಿದ್ದಾರೆ.

ಕೆಲವೇ ವರ್ಷಗಳಲ್ಲಿ ಕಾಣುವ ಆರ್ಥಿಕ ಸ್ಥಿತ್ಯಂತರಗಳು, ಸಾಮಾಜಿಕ ಮೌಲ್ಯಗಳ ಸಂರಚನೆಯನ್ನು ಅಲ್ಲೋಲ ಕಲ್ಲೋಲ ಮಾಡಿದ್ದಲ್ಲದೆ, ಅಕ್ಷರಕಲಿಕೆಯು ಜನರಿಗೆ ಬದುಕು ಮಾತ್ರವಲ್ಲ ಹಣಗಳಿಕೆಯ ಸಾಧ್ಯತೆಯನ್ನು, ಭಿನ್ನ ಜಗತ್ತಿನ ಬದುಕಿನ ಅನುಭವದ ಹಾಗೂ ಸ್ವಾದವನ್ನು, ಆಸ್ವಾದಿಸುವ ಆಂಕಾಕ್ಷೆಯನ್ನು ಏಕಕಾಲಕ್ಕೆ ದಯಪಾಲಿಸಿತು. ಅದರೆ ತೃಪ್ತಿಯ ಗೆರೆಯನ್ನು ದಾಟಿ ಮಹತ್ವಾಕಾಂಕ್ಷೆಯ ಬೆನ್ನು ಹತ್ತಿರುವ ವರ್ಗ ಹಾಗೂ ಸಮಾಜದಲ್ಲಿನ ಭಿನ್ನ ಸ್ವರೂಪದ ಪೊರೆ ಕಳಚಿಕೊಂಡು ಬಂದ ಅರೆನಗರ ಬದುಕಿನ ಅನುಭವ ಪ್ರಪಂಚದ ಕಥನದ ಮೋಡಿಯ ಈ ಚಿತ್ರ ಮಾತ್ರ ಕನ್ನಡಿಯಂತಿದೆ. ಅಂತರವನ್ನು ಗುರುತಿಸುವಲ್ಲಿ ವಸುಧೇಂದ್ರ ಅವರ ಆಯ್ದ ೫ ಕಥಾಸಂಕಲನಗಳು ಹಾಗೂ ಕಥೆಯ ಒಡಲಲ್ಲಿ ಸುಪ್ತವಾಗಿ ಬಚ್ಚಿಟ್ಟುಕೊಂಡ 'ಸಾಮಾಜಿಕ ಪ್ರಜ್ಞೆ' ಎಂಬ ಸೀಮಾತೀತವಾದ ವಿಚಾರಗಳು ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಇವು ಯಶಸ್ವಿಯಾಗಿವೆ.

ಈ ಬದಲಾದ ಸಾಮಾಜಿಕ ಸ್ಥಿತ್ಯಂತರಗಳು, ಬ್ರಾಹ್ಮಣ ಸಮಾಜದ ಮಡಿವಂತಿಕೆ, ಧಾರ್ಮಿಕ ಪ್ರಜ್ಞೆ, ಸಲಿಂಗ ಪ್ರೇಮ, ಜಾತಿಯ ಸ್ವರೂಪ, ಹಳೆಯ ಸುಧಾರಣೆ – ಇವು ಗತ ಮತ್ತು ವರ್ತಮಾನದಲ್ಲಿ ಬದುಕುತ್ತಿರುವ ಜನಗಳ ಸಾಮಾಜಿಕ ವ್ಯತ್ಯಾಸಗಳನ್ನು ತೋರಿಸುವುದರ ಜೊತೆಗೆ ಪಕ್ವಗೊಂಡ ಅನುಭವದ ಜೊತೆ ಸಾಗಿ 'ಜಾಗೃತ ಸಮಾಜದ' ನಿರ್ಮಾಣಕ್ಕೆ ಒಂದು ಹೊಸ ಆಯಾಮವನ್ನೆ ಸೃಷ್ಟಿಮಾಡಿದೆ. ಅಷ್ಟೇ ಅಲ್ಲದೆ ಈ ಲೋಕದ ಎದುರುಗಿರುವ ಅರ್ಥ ಸಾಪಲ್ಯದ ಜಗತ್ತಿನ ಕ್ರೌರ್ಯವನ್ನು ವಸುಧೇಂದ್ರ ಅವರ ಕಥೆಗಳು ಖಂಡಿಸುತ್ತ ವಾಸ್ತವ ಜಗತ್ತಿನತ್ತ ಮುಖಮಾಡಿವೆ ಎನ್ನಬಹುದು.

**"ಸ್ತ್ರೀಪಾತ್ರದ ವೈಶಿಷ್ಟ್ಯಗಳು"**

ವಸುಧೇಂದ್ರರವರು ತಾಂತ್ರಿಕ ಕ್ಷೇತ್ರದಲ್ಲಿ ಗುರುತಿಸಿ ಕೊಂಡವರಾದರೂ ತಮ್ಮ ಕಥೆಗಳಲ್ಲಿ ಸ್ತ್ರೀಪರ ಕಾಳಜಿ ತೋರಿರುವುದು ಇವರ ಕಥೆಗಳ ಮತ್ತೊಂದು ವೈಶಿಷ್ಟ್ಯ. ಆದರೆ ಇವರು ಎಲ್ಲಿಯೂ ಪುರುಷ ಪ್ರಧಾನ ಸಮಾಜವನ್ನು ವಿರೋಧಿಸಿರುವ ಯಾವ ಸಂಗತಿಗಳು ಇವರ ಕಥೆಯಲ್ಲಿ ಕಾಣಸಿಗುವುದಿಲ್ಲ. ಇವರು ಯಾವುದೇ ವಿಷಯವನ್ನು ಹೇಳಬೇಕಾದರೂ ಮೌನವಾಗಿ ಹೇಳುತ್ತಾರೆ. ಆಕ್ರೋಶವಿಲ್ಲ ಎಲ್ಲಿಯೂ ವಿರೋಧವಿಲ್ಲ.

ಇವರ ಕಥೆಗಳಲ್ಲಿ ಕಂಡು ಬರುವ ಎಲ್ಲಾ ಸ್ತ್ರೀ – ಪಾತ್ರಗಳು ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗ ಎಂಬ ಭಿನ್ನ ವರ್ಗಗಳಾಗಿ ಹಾಗೂ ನೋವಿನ ಪಾತ್ರಗಳಾಗಿ ಕಂಡು ಬಂದಿರುವುದು ಮತ್ತೊಂದು ವೈಶಿಷ್ಟ್ಯವಾಗಿದೆ. ಆದರೆ ಕೆಲವು ಸಂದರ್ಭದಲ್ಲಿ ಕಥೆಗಾರರ ಅನುಭವವೇ ಸ್ತ್ರೀ ಪಾತ್ರವಾಗಿ ಚಿತ್ರಿತವಾಗುತ್ತಾ ಹೋಗುತ್ತದೆ. ಬಹುಪಾಲು ಕಥೆಯ ದೃಷ್ಟಿಯು ಮಹಿಳೆಯ ಸಂವೇದನೆಯ ಜೊತೆಗೆ ವಿಧವೆಯರ ಸಮಸ್ಯೆ ಮತ್ತು ಸವಾಲುಗಳು ಕಥೆಯ ಉದ್ದಕ್ಕೂ ಕಂಡುಬರುತ್ತವೆ. ವಿಧವೆಯಾದ ಹೆಣ್ಣೊಬ್ಬಳು ತನ್ನ ತನವನ್ನು ಕಂಡುಕೊಳ್ಳುವ ಸಂದರ್ಭದಲ್ಲಿ ನಿರ್ಮಾಣವಾಗುವ ಹಾಗೂ ಪಾಲಿಸಲೇಬೇಕಾದ ಕೆಲವು ಸಂಪ್ರದಾಯದ ಕಟ್ಟುಪಾಡುಗಳಿಗೆ ಸಿಲುಕಿ ನಲುಗುವುದನ್ನು ಕಂಡ ಕಥೆಗಾರರು ತಮ್ಮದೆಯಾದ ರೀತಿಯಲ್ಲಿ ಕಟ್ಟಿಕೊಟ್ಟಿದಾರೆ.

ವಸುಧೇಂದ್ರರವರು ತಾವು ಕಂಡು ಕೇಳಿದ ಜನಪದ ಕಥೆ, ಪ್ರಸಂಗ, ಐತಿಹ್ಯದಂತಹ ದಂತಕತೆಗಳು ಇವರನ್ನು ಸೃಜನಾತ್ಮಕವಾಗಿ ಪುನರ್ ನಿರ್ಮಿಸುವುದರ ಜೊತೆಗೆ ಸೊಗಸಾದ ಕಥೆ ಕಟ್ಟುವ ಜಾಣ್ಮೆ ಇವರಿಗೊಂದು ವರವಾಗಿ ಸಿದ್ದಿಸಿದೆ. ಈ ಗುಣದಿಂದಲೇ ಇವರು ವಿಭಿನ್ನವಾಗಿ ಕಥೆ ಎಣೆಯುವ ಕೌಶಲ್ಯವನ್ನು ತನ್ನದಾಗಿಸಿಕೊಂಡಿದ್ದಾರೆ. ಮೂಲತಃ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಬಂದ ವ್ಯಕ್ತಿಯ ದೃಷ್ಠಿ ಪಥದಲ್ಲಿ ಅವನ ತಾಯಿ ರೂಪುಗೊಳ್ಳುವ ಚಿತ್ರ ಒಂದೆಡೆಯಾದರೆ, ಬ್ರಾಹ್ಮಣ ಸಮಾಜದಲ್ಲಿಯೇ ಹುಟ್ಟಿ, ಆ ಸಮಾಜದ ಮೂಢನಂಬಿಕೆಗೆ ತಮ್ಮ ಬದುಕನ್ನು ಬಲಿಕೊಟ್ಟಂತಹ ಮಡಿ ಹೆಂಗಸರ ನೋವಿಗೆ ದನಿಯಾಗಿರುವ ಪ್ರಸಂಗಗಳೆಲ್ಲವು ಜೀವಂತವೆಂಬಂತೆ ಮೂಡಿ ಬಂದಿರುವ ಪ್ರಸಂಗವಿದೆ. ಉದಾ: 'ನಮ್ಮವಾಜಿನ್ನೂ ಆಟಕ್ಕೆ ಸೇರಿಸ್ಕೊಳ್ರೋ' ಎಂಬ ಕಥೆಯಲ್ಲಿ ಬರುವ ಕಮಲಕ್ಕನ ಪಾತ್ರವು ಭಿನ್ನವಾಗಿ ಮೂಡಿಬಂದಿದೆ. ಕಮಲಕ್ಕ, ತಾನು ಮಡಿ ಹೆಂಗಸಾಗಿದ್ದುಕೊಂಡು ಬ್ರಾಹ್ಮಣ ಪುರುಷರ ಜೀವನ ಶೈಲಿಯ ವಿರುದ್ದವೇ ಸವಾಲು ಹಾಕುವ ದಿಟ್ಟ ಮಹಿಳೆಯ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾಳೆ. ವಿಧವೆಯಾದ ಈಕೆ ತನ್ನ ಮಗನ ತೊನ್ನಿನ ಸಮಸ್ಯೆಯ ವಿರುದ್ದ ಕಮಲಕ್ಕ ಹೊರಾಡುವ ರೀತಿಯು ಮೆಚ್ಚುವಂತದ್ದಾಗಿದೆ. ಆದರೆ ಬ್ರಾಹ್ಮಣ ಸಮಾಜ ಹೇರಿದ ಹೊಣೆಯನ್ನು ತಮ್ಮ ಕರ್ಮವೆಂದು ಒಪ್ಪಿಕೊಂಡು, ಮುಗ್ದಳಾಗಿ ಅದರ ವಿರುದ್ದ ಹೊರಾಡಲು ಹೋಗಿ, ಮತ್ತೆ ಅದೇ ಸಂಪ್ರದಾಯದ ಕಾಲುತುಳಿತಕ್ಕೆ ಸಿಕ್ಕಿ ನಲುಗುವ ಹಾಗೂ ಸವಾಲು ಹಾಕಿ ಅದನ್ನು ಮೀರದೆ ಹವಣಿಸುವ ಮಡಿಹೆಂಗಸರ ಜೀವನದ ಪರಿತಾಪವನ್ನು ಆಧುನಿಕ ಬದಿಕಿಗೆ ಹತ್ತಿರವೆಂಬಂತೆ ಕಟ್ಟಿಕೊಟ್ಟಿದ್ದಾರೆ.

**"ಸಾಫ್ಟ್‌ವೇರ್ ಪ್ರಪಂಚದ ಭಿನ್ನನೆಲೆಗಳು"**

ವಸುಧೇಂದ್ರರವರ **'ಮನಿಷೆ'** ಸಂಕಲನದ ಕೆಲವು ಕಥೆಗಳು ಮಡಿಹೆಂಗಸರ ಕಷ್ಟದ ಬದುಕಿಗೆ ಮಿಡಿದರೆ **'ಯುಗಾದಿ'** ಯಂತಹ ಕಥಾಸಂಕಲನ ಸಾಫ್ಟ್‌ವೇರ್ ಪ್ರಪಂಚ ಮತ್ತು ಬಯಲು ಸೀಮೆಯ ಅನುಭವದ ಸಂಮಿಶ್ರಣದ ನಡುವೆ ಅನಾವರಣಗೊಳ್ಳುತ್ತವೆ. ಸಂಡೂರಿನಂತಹ ಸೀಮಿತ ಗ್ರಾಮದ ಸೀಮೆಯಲ್ಲಿ ನಿಂತು ಸಾಫ್ಟ್‌ವೇರ್ ಕಂಪನಿಯ ಅನುಭವವನ್ನು ಪಡೆದು, ಅಲ್ಲಿನ ನೌಕರರ ಬದುಕಿನ ಸೂಕ್ಷ್ಮತೆಯನ್ನು ತಮ್ಮ ಕಥೆಯಲ್ಲಿ ಚಿತ್ರಿಸಿರುವ ರೀತಿ ಮಾತ್ರ ಕ್ರಿಯಾತ್ಮಕವಾಗಿದೆ. ಪ್ರತಿ ಕ್ಷಣವು ವಿಕಾಸದ ಹಾದಿಯಲ್ಲಿರುವ ತಂತ್ರಜ್ಞಾನದಂತಹ ಕಂಪನಿಗಳಲ್ಲಿ ಕೆಲಸ ನಿರ್ವಹಿಸುವ ಎಲ್ಲ ನೌಕರರು ಯಾಂತ್ರಿಕವಾಗಿ ಪರಿವರ್ತನೆಗೊಂಡು ಅವುಗಳನ್ನೇ ಅವಲಂಬಿಸಿ ಬದುಕುವ ಜನರು ಒಮ್ಮೊಮ್ಮೆ ಸವಾಲನ್ನು ಸ್ವೀಕರಿಸಲಾಗದೆ ಈ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿ ನಲುಗಿದ್ದಾರೆ ಈ ಎಲ್ಲದರ ಸಂಗತಿಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುವ ಒಂದು ಪ್ರಯತ್ನದ ಫಲವಾಗಿಯೇ ಈ ಯುಗಾದಿಯಂತಹ ಸಂಕಲನ ರೂಪಗೊಂಡಿದೆ ಎಂದರೂ ತಪ್ಪಾಗಲಾರದು.

ಸಾಫ್ಟ್‌ವೇರ್ ಇಂಜಿನಿಯರಗಳ ಮೇಲಿನ ಕುರುಡು ಹೇಗಿರುತ್ತದೆ ಎಂಬುದು ಯುಗಾದಿ ಕಥೆಯಲ್ಲಿ ಬಿಂಬಿತವಾಗಿದೆ, ಪ್ರಹ್ಲಾದನು ಶಾಲೆಯ ಮಾಸ್ತರ್ ಆದಂತಹ ಗೋಪಣ್ಣನ ಮಗ, ಇವನು ದೊಡ್ಡ ಐ.ಟಿ. ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದು ಬಿಡುವಿಲ್ಲದೆ ದುಡಿಯುತ್ತಿರುತ್ತಾನೆ, ಐಷಾರಮಿ ಬದುಕು ಕಟ್ಟಿಕೊಂಡು ಉನ್ನತವಾದ ಹುದ್ದೆಯಲ್ಲಿದ್ದರೂ ತನ್ನ ತಂದೆಯ ಸ್ನೇಹಿತನ ಮಗನಿಗೆ ತನ್ನದೆ ಕಂಪನಿಯಲ್ಲಿ ಒಂದು ಉದ್ಯೋಗವನ್ನು ಕೊಡಿಸಲಾಗದಷ್ಟು ಅಸಹಾಯಕನಾಗುತ್ತಾನೆ. ಆದರೆ ಈ ಸಂದರ್ಭ ಮಾತ್ರ ಅಂಕಗಳಿಕೆಯ ವ್ಯಕ್ತಿಗೆ ಮಾತ್ರ ಅವಕಾಶ ಎಂಬ ಮಾಹಿತಿ ತಂತ್ರಜ್ಞಾನ ಕಂಪನಿಗಳ ಮಾಲೀಕರ ಧೋರಣೆಯನ್ನು ಈ ಕಥೆಯು ವಿಡಂಬಿಸಿದೆ. ಗ್ರಾಮೀಣ ಪ್ರದೇಶದಿಂದ ಬಂದು ಐ.ಟಿ. ಕಂಪನಿಗಳ ಕೀಲುಗೊಂಬೆಯಂತೆ ದುಡಿಯುವ ಜನರ ಪ್ರಾತಿನಿಧಿಕ ವ್ಯಕ್ತಿಯ ಸಂಕೇತವಾಗಿ ಕಾಣಸಿಕ್ಕಿದ್ದಾನೆ. ಹೀಗಾಗಿ ಕಾರ್ಪೊರೇಟ್ ಜಗತ್ತಿನ ಅರ್ಥಶಾಸ್ತ್ರೀಯ ವ್ಯವಸ್ಥೆಯಿಂದ ಜೀವಂತವಿರುವ ಲೋಕ ಬೆಂಗಳೂರು. ಆದರೆ ಪ್ರತಿಪಾದಿಸಲ್ಪಡುವ ಮೌಲ್ಯಗಳೆಲ್ಲವೂ ಭಿನ್ನರೂಪದವೂ, ಸಂಡೂರಿನಂತ ಬಯಲು ಸೀಮೆಯ ಬದುಕು ಬಡತನದ್ದು ಅಥವಾ ಅದಕ್ಕಿಂತ ಸ್ವಲ್ಪ ಮೆಲ್ಮಟ್ಟದ್ದು, ಇವೆರಡರ ನಡುವಿನ ಬದುಕಿನ ಮದ್ಯೆ ನಿಂತಿರುವ ಕಥೆಗಾರನ ಭಾವನಾತ್ಮಕ ಚೈತನ್ಯವನ್ನು ಪೂರೈಸಿಕೊಳ್ಳಲು ತನ್ನದೇ ಆದಂತಹ ಬಾಲ್ಯದ ಅನುಭವವನ್ನೇ ಅವಲಂಬಿಸಿ ನಿಂತಿದ್ದಾರೆ. ಇಲ್ಲಿ ನಾವು ಗಮನಿಸಬೇಕಾದ ಬಹು ಮುಖ್ಯ ಅಂಶವೆಂದರೆ ಕಥೆಗಾರನ ವೈರುದ್ಯಗಳು ರೂಪುಗೊಂಡಿವೆ ಎಂಬುದು. ಈ ಜಗತ್ತಿನ ಎದುರು ಆರ್ಥಿಕವಾಗಿ ಸಬಲವಾಗಿರುವ ಬೆಂಗಳೂರಿನಂತಹ ಆಧುನಿಕ ತಂತ್ರಜ್ಞಾನದಂತಹ ಮಹತ್ತರ ಕ್ರಾಂತಿಯಿಂದಾಗಿ ಹೊರ ಜಗತ್ತಿನ ಸಂಪರ್ಕ ಬೆಸೆದುಕೊಂಡಿದೆ, ಆದರೆ ಅಲ್ಲಿನ ಅತ್ಯಾಧುನಿಕ ಸೌಲಭ್ಯಗಳ ಜೊತೆ ಇಲ್ಲಿರುವ ವರ್ತಮಾನದ ಕೊರತೆ ಸಮಾಧಾನವಾಗಿಯೇ ಚಿತ್ರಿಸಿರುವ ಶೈಲಿ ಇವರ ಕಥಾಸಾಹಿತ್ಯಕ್ಕೆ ಮೆರಗು ನೀಡುವುದರ ಮುಖೇನ ಸಾಫ್ಟ್‌ವೇರ್ ಪ್ರಪಂಚದ ಭಿನ್ನರೂಪವನ್ನು ದರ್ಶಿಸಿದೆ.

**"ಆಧುನೀಕರಣ"**

ವಸುಧೇಂದ್ರರವರ ಕಥೆಗಳ ವೈಶಿಷ್ಟ್ಯವಿರುವುದೇ ಅವರ ಬಾಲ್ಯದ ಅನುಭವವನ್ನು ಕಥೆಗಳಲ್ಲಿ ಕಟ್ಟುವುದರಿಂದ, ಆ ಬಯಲು ಸೀಮೆಯಲ್ಲಿ ಕಾಣಸಿಗುವ ಗುಡಿಗೋಪುರಗಳು, ಅಪರೂಪಕ್ಕೆ ಸುರಿಯುವ ಮಳೆ, ಸಂಡೂರಿನ ಬೆಟ್ಟಗುಡ್ಡ, ದೆವ್ವಗಳಂತೆ ಕಾಣಸಿಗುವ ಹುಣಸೆ ಮರಗಳು, ಅಲ್ಲಿನ ಬ್ರಾಹ್ಮಣ ಕೇರಿಗಳು, ಮನೆಯ ಹಿತ್ತಲಲ್ಲಿ ಓಡಾಡುವ ಊರ ಹಂದಿಗಳು, ಬ್ರಾಹ್ಮಣ ಸಮಾಜದ ಮಡಿಹೆಂಗಸರ ಆಚಾರ ವಿಚಾರ, ಕಾಯಕ, ದುಡಿಮೆ, ಮಠ–ಮಾನ್ಯಗಳ ಆರಾಧನೆ ಇತ್ಯಾದಿ ಚಿತ್ರಣವನ್ನು ವಸುಧೇಂದ್ರರವರು ತಮ್ಮ ಕಥೆಗಳಲ್ಲಿ ದಾಖಲಿಸುವ ಮೂಲಕ ತಮ್ಮ ದೇಶೀಯ ಚಿಂತನೆ ಮತ್ತು ವಸ್ತುಗಳಿಗೆ ಒಂದು ಹೊಸ

ಆಯಾಮವನ್ನೇ ಸೃಷ್ಟಿ ಮಾಡಿದ್ದಾರೆ. ನಮ್ಮ ಮೂಲ ಸಂಸ್ಕೃತಿ ಆಧುನೀಕರಣದ ಪ್ರಭಾವದಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಡೆಸುವ ಹೋರಾಟ ಮತ್ತು ಅತಿಯಾದ ನಗರೀಕರಣದಿಂದಾಗಿ ನಿರ್ಮಾಣವಾಗುವ ದುರಂತವನ್ನು 'ಚೇಳು' ಎಂಬ ಕಥೆಯ ಮೂಲಕ ಒಂದು ಸಮಾಜದ ವಿಭಿನ್ನ ಮಜಲನ್ನು ವಾಸ್ತವಕ್ಕೆ ಹತ್ತಿರವಾಗಿರುವಂತೆ ಕಟ್ಟಿ ಕೊಟ್ಟಿರುವ ರೀತಿ ಮಾತ್ರ ಮೆಚ್ಚುವಂತದ್ದು. ಉದಾ: 'ಚೇಳು' ಎಂಬ ಕಥೆಯಲ್ಲಿ ವೆಂಕಮ್ಮನೆಂಬ ಸಾಮಾನ್ಯ ಮಹಿಳೆಯೊಬ್ಬಳು, ಚೇಳು ಕಡಿತಕ್ಕೆ ಔಷಧಿ ನೀಡುವ ತಜ್ಞೆಯಾಗಿ ಉನ್ನತೀಕರಣಕ್ಕೆ ಪರಿವರ್ತನೆಯಾಗುವ ಎಲ್ಲ ರೀತಿಯ ಸೂಚನೆ ಮತ್ತು ನಿರ್ದೇಶನವನ್ನು ಬಹಳ ಗಟ್ಟಿಯಾಗಿ ಈ ಕಥೆ ನಿರೂಪಿಸಿದೆ. ಮಕ್ಕಳಿಲ್ಲದ ವೆಂಕಮ್ಮನನ್ನು ಗಂಡ ಕೋಮಣ್ಣನು ಬಲವಂತವಾಗಿ ಭೈರವ ಬಾಬಾನಿಂದ ಪ್ರಸಾದ ತೆಗೆದುಕೊಂಡು ಬರುವಂತೆ ಕಳುಹಿಸಿದಾಗ, ಅದು ಅಂತಿಮವಾಗಿ ಅವರಿಬ್ಬರ ಧೈಹಿಕ ಸಂಬಂಧದಲ್ಲಿ ಕೊನೆಗೊಳ್ಳುತ್ತದೆ. ಕೊನೆಗೆ ಕೋಮಣ್ಣ ವೆಂಕಮ್ಮನನ್ನು ತ್ಯಜಿಸಿ ಬೇರೊಂದು ಮದುವೆ ಮಾಡಿಕೊಳ್ಳುತ್ತಾನೆ. ಭೈರವ ಬಾಬಾ ವೆಂಕಮ್ಮನಿಗೆ ಚೇಳು ಮಂತ್ರದ ದೀಕ್ಷೆಯನ್ನು ಕೊಟ್ಟು ಯಾವ ಮೂಲಿಕೆಯಿಂದ ಔಷದಿ ತಯಾರಿಸಬಹುದೆಂಬ ರಹಸ್ಯವನ್ನು ತಿಳಿಸುತ್ತಾನೆ. ವೆಂಕಮ್ಮನ ಮೊದಲ ಪ್ರಯೋಗ ಯಶಸ್ವಿಯಾಗಿ ಊರ ಜನರ ತಿರಸ್ಕಾರಕ್ಕೆ ಗುರಿಯಾಗಿದ್ದ ವೆಂಕಮ್ಮ ತನ್ನ ಜಾಣ್ಮೆ ಮತ್ತು ಕೌಶಲ್ಯದಿಂದ ಜನರ ಮೆಚ್ಚುಗೆಗೆ ಪಾತ್ರಳಾಗಿ ಸಾಮಾಜಿಕವಾದ ಸ್ಥಾನಮಾನವನ್ನು ಕಟ್ಟಿಕೊಳ್ಳುತ್ತಾಳೆ.

ವೆಂಕಮ್ಮನಿಗೆ ಇಂತಹ ಮರ್ಯಾದೆ ಸಿಗುವುದು ಕೇವಲ ಅವಳು ಚೇಳಿನ ಕಡಿತಕ್ಕೆ ಔಷದಿ ತಯಾರಿಸುತ್ತಾಳೆ ಎಂಬ ಕಾರಣಕ್ಕಲ್ಲ ಎಂಬುದನ್ನು ಎಲ್ಲರು ಇಲ್ಲಿ ಸೂಕ್ಷವಾಗಿ ಗ್ರಹಿಸಬೇಕಾಗುತ್ತದೆ. ವೆಂಕಮ್ಮನಂತಹ ಅನೇಕ ಹೆಂಗಸರು ನೀಡುವ ಸೇವೆ ಅಥವ ತಮ್ಮಲ್ಲಿ ರೂಢಿಸಿಕೊಂಡ ಕೌಶಲ್ಯದ ಹಿಂದೆ ಒಂದು ವಿಭಿನ್ನವಾದ ಮತ್ತು ಸ್ವೀಕಾರಕ್ಕೆ ಅರ್ಹವಾದ ಜೀವನ ಕ್ರಮ ಇದೆ ಎಂಬ ಅರಿವು ನಮಗಾದರೆ ಮಾತ್ರ ಅದರ ಮಹತ್ವವನ್ನು ನಾವೂ ತಿಳಿಯಬಹುದು. ಈ ಆಧುನಿಕ ಜಗತ್ತಿನಲ್ಲಿರುವಂಥ 'ವರ್ತಕ-ಗ್ರಾಹಕ' ಸಂಬಂಧಕ್ಕಿಂತ ಭಿನ್ನವಾದ ಸಂಬಂಧ ಊರಿನ ಜನರು ಮತ್ತು ವೆಂಕಮ್ಮನದು. ಉಪಚಾರಗಳು ಗ್ರಾಹಕ ಸಂಸ್ಕೃತಿಯ ನಮ್ಮ ಕಾಲದಲ್ಲಿ ಲಭ್ಯವಿಲ್ಲ ಎಂಬುದನ್ನು ನಾವು ನೆನಪಿಡಬೇಕು.

ಮುಂದೊಂದು ದಿನ ಈ ಊರಿಗೂ ಆಧುನೀಕತೆಯ ಪ್ರವೇಶವಾಗುತ್ತದೆ ಗಾಣಿಗರ ಕೊಟ್ರೇಶಿಯು ಚೇಳನ್ನು ಕೊಲ್ಲುವಂಥ ಕೆಂಪು ದ್ರಾವಣವನ್ನು ಊರಿಗೆ ಪರಿಚಯಿಸುತ್ತಾನೆ. ೧೦ ರೂಪಾಯಿಗೆ ಒಂದು ಸೀಸೆಯಂತೆ ದ್ರಾವಣವನ್ನು ಮಾರಾಟ ಮಾಡುತ್ತಾನೆ, ಒಂದೇ ದಿನದಲ್ಲಿ ಸಾವಿರಾರು ಚೇಳುಗಳು ಆ ವಿಷಕ್ಕೆ ಬಲಿಯಾಗಿ ಆ ಊರಿನಲ್ಲಿ ಚೇಳುಗಳೇ ಇಲ್ಲವಾಗುತ್ತವೆ. ಆಗ ವೆಂಕಮ್ಮನ ಅವಶ್ಯಕತೆ ಅನಿವಾರ್ಯವಾಗಿ ಇಲ್ಲವಾಗುತ್ತದೆ, ಕೊನೆಗೆ ಸಾಮಾಜಿಕ ಸ್ಥಾನಮಾನವನ್ನು ಕಳೆದು ಕೊಂಡವಳಾಗಿ ಆ ದ್ರಾವಣವನ್ನೇ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಈ ಸಂಗತಿಯಲ್ಲಿ ವಸುಧೇಂದ್ರರವರು ಆಧುನೀಕತೆಯ ಪ್ರಭಾವದಿಂದಾಗಿ ಮೂಲ ಸಂಸ್ಕೃತಿಯು ನೆಲೆ-ಬೆಲೆ ಎರಡನ್ನು ಕಳೆದುಕೊಳ್ಳುತ್ತಿರುವ ಸಂಗತಿಯನ್ನು ಸೂಚ್ಯವಾಗಿಯೇ ವಿವರಿಸಿದ್ದಾರೆ, ಅದೇ ರೀತಿ 'ಚೇಳು' ಎಂಬ ಸಂಕಲನದಲ್ಲಿ 'ಗುಳ್ಳೆ' ಎಂಬ ಕಥೆಯು ಕೂಡ ವಿಭಿನ್ನವಾಗಿದೆ, ಇಂದಿನ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಅಲ್ಪಾವದಿಯ ಕಂಪ್ಯೂಟರ್ ಕೋರ್ಸ್ ಮಾಡಿ ಉದ್ಯೋಗಕ್ಕೆ ಸೇರಿದವನ ಸ್ಥಿತಿ ಮತ್ತು ಖಾಸಗಿ ಕಂಪನಿಯಲ್ಲಿ ಕೌಶಲ್ಯವೇ ಪ್ರಮುಖ ಮಾನದಂಡವಾಗಿರುವುದರಿಂದ, ಈ ಕ್ಷೇತ್ರಕ್ಕೆ ಬೇಕಾದ ಆಳವಾದ ಜ್ಞಾನ, ಉತ್ತಮ ಗುಣಮಟ್ಟದ ಶಿಕ್ಷಣ, ಅನುಭವದ ಅವಶ್ಯಕತೆ, ಇತ್ಯಾದಿಗಳ ಬಗ್ಗೆ ಸರಿಯಾದ ಪರಿಜ್ಞಾನವಿಲ್ಲದಿದ್ದರೆ ಉದ್ಯೋಗದಿಂದ ವಂಚಿತರಾಗುವ ಸಂಬವವಿರುತ್ತದೆ, ತಂತ್ರಜ್ಞಾನ ಜಗತ್ತಿನ ಅತ್ಯಗತ್ಯೆಗಳನ್ನು ಮತ್ತು ಒಬ್ಬ ಉದ್ಯೋಗಿಯಾದವನಿಗೆ ಇರಬೇಕಾದ ಕನಿಷ್ಠ ಪೂರೈಕೆಗಳನ್ನು ಸಹ ಮಾರ್ಮಿಕವಾಗಿ ವಿವರಿಸಿದ್ದು, ತಂತ್ರಜ್ಞಾನ ಕ್ಷೇತ್ರದ ಆಧುನಿಕ ಬದುಕು ಕಟ್ಟಿಕೊಂಡಿರುವ ಉದ್ಯೋಗಿಗಳಿಗೆ ಈ ಕಥೆ ಒಂದು ಎಚ್ಚರಿಕೆಯ ಕರೆಗಂಟೆಯಾಗಿ ಕಾಣಿಸಿಕ್ಕಿದೆ ಎನ್ನಬಹುದು.

**"ಪರಿಸಮಾಪ್ತಿ"**

ಹೀಗೆ ವಸುಧೇಂದ್ರರವರ ಬಹುಪಾಲು ಕಥೆಗಳು ಸಾಫ್ಟ್‌ವೇರ್ ಜಗತ್ತಿನ ಹುಳುಕುಗಳನ್ನ ಹೋಲಿಸಿ ನೋಡುವುದರ ಹಂತದಲ್ಲಿಯು ನಿಲ್ಲುತ್ತವೆ. ಈ ಕಾರಣದಿಂದಾಗಿ ಅವರ ಕೆಲವು ಕಥೆಗಳು ಓದುಗವರ್ಗವನ್ನು ರಂಜಿಸುತ್ತವೆ. ಹಳೆಯ ನೆನಪುಗಳಿಗೆ ನಮ್ಮನ್ನು ಕರೆದೊಯ್ದು ಮುದಗೊಳಿಸುತ್ತವೆ, ಮತ್ತೊಮ್ಮೆ ಈ ಲೋಕದ ಎದುರಿಗಿರುವ ಅರ್ಥಸಾಫಲ್ಯದ ಜಗತ್ತಿನ ಕ್ರೂರತೆಯನ್ನು ಖಂಡಿಸುತ್ತದೆ ಹಾಗೂ ವರ್ತಮಾನದಲ್ಲಿ ನಮ್ಮನ್ನು ನಿಲ್ಲಿಸಿ ಭಿನ್ನ ಸ್ವರೂಪದ ಚಿಂತನಾ ಕ್ರಮದಲ್ಲಿ ಬಂಧಿಂಸುವಂತೆ ಮಾಡಿರುವುದೇ ವಸುಧೇಂದ್ರರವರ ಎಲ್ಲ ಕಥೆಗಳ ವೈಶಿಷ್ಟ್ಯವೂ ಹೌದು.

ಈ ಕಥೆಗಳೆಲ್ಲವು ಬದುಕಿನ ಅನುಭವಗಳೊಂದಿಗೆ ಬೆರೆತು ರೂಪಗೊಳ್ಳುತ್ತವೆ. ಇವರ ಅನುಭವಗಳೆಲ್ಲವು ಬರವಣಿಗೆಯ ಜೊತೆ ಪೂರಕವಾಗಿ ಒಂದನೊಂದು ಎಣೆದುಕೊಂಡಿವೆ. ಇಂದಿನ ತಂತ್ರಜ್ಞಾನ ಮತ್ತು ಮಾರುಕಟ್ಟೆಯ ಲೋಕದಲ್ಲಿ ಗುಪ್ತಗಾಮಿನಿಯಾಗಿರುವ ಭಯ, ಆತಂಕ ಮತ್ತು ತಲ್ಲಣವನ್ನು ಗುರುತಿಸುತ್ತಿವೆ. ಇವರ ಕೆಲವು ಕಥೆಗಳಲ್ಲಿ ಈ ಜಗತ್ತು ಹಳ್ಳಿಯ ಬಡಹೆಣ್ಣಿಗೆ ಕೊಟ್ಟಿರುವ ಯಶಸ್ಸು, ಆತ್ಮವಿಶ್ವಾಸ ಮತ್ತು ಆಕೆ ತನ್ನ ಉನ್ನತಿಗೆ ತೆರಬೇಕಾದ ಬೆಲೆ, ಹಾಗೂ ಇಂದಿಗೆ ಬದಲಾಗುತ್ತಿರುವ ವರ್ತಮಾನದ ಸಾಂಸ್ಕೃತಿಕ ಪಲ್ಲಟವನ್ನು ವಿಭಿನ್ನ ದೃಷ್ಟಿಕೋನಗಳಿಂದ ಪರಿಚಯಿಸುವಲ್ಲಿ ಸಮರ್ಥವಾಗಿದೆ, ಇಂತಹ ವಿಭಿನ್ನ ನೆಲೆಗಳನ್ನು ಗುರುತಿಸುವಲ್ಲಿ ವಸುಧೇಂದ್ರರ ಕಥಾಸಂಕಲಗಳು ಸಮರ್ಥವಾಗಿ ರೂಪುಗೊಂಡಿವೆ.